ಮೈಸೂರು ವಿಶ್ವವಿದ್ಯಾನಿಲಯ

# ಹೊನ್ನ ಹಣತೆಯ ಬೆಳ್ಳಿ ಬೆಳಕು



ಸಂ. ಪ್ರೊ. ಎಂ. ಶಂಕರ

**ಹೇಮಗಂಗೋತ್ರಿ**

**ಮೈಸೂರು ವಿಶ್ವವಿದ್ಯಾನಿಲಯ ಸ್ನಾತಕೋತ್ತರ ಕೇಂದ್ರ**

**ಹಾಸನ**

Scanned with CamScanner

# 7. ತಾಂತ್ರಿಕತೆಯಲ್ಲಿ ಸ್ಪರ್ಶತಂತುವಿನ ಪ್ರಾಮುಖ್ಯ

– ಡಾ. ಹಾಲಪ್ಪ ಆರ್. ಗಾಜೀರ

---

*ಪೀಠಿಕೆ*

ನಮಗೆಲ್ಲರಿಗೂ ಗೊತ್ತಿರುವ ಹಾಗೆ ನಮ್ಮೆಲ್ಲರ ಜೀವನದಲ್ಲಿ ತಾಂತ್ರಿಕತೆಯ ಉಪಯೋಗವು ಅಗಾಧವಾಗಿ ಬೇರೂರಿದೆ. ಅದರಲ್ಲಿಯೂ ನಿಸ್ತಂತು ಸಂವಹನ (ವೈರ್‌ಲೆಸ್ ಕಮ್ಯೂನಿಕೇಶನ್) ಮತ್ತು ಸಂಚಾರಿ ಸಂವಹನ (ಮೊಬೈಲ್ ಕಮ್ಯೂನಿಕೇಶನ್)ಗಳು ಅತಿಯಾದ ಪ್ರಭಾವವನ್ನು ಬೀರಿವೆ. ಈಗಿನ ಜೀವನ ಕ್ರಮದಲ್ಲಿ ಪ್ರತಿಕ್ಷಣವೂ ಈ ತಾಂತ್ರಿಕತೆಯನ್ನು ಉಪಯೋಗಿಸಿಕೊಂಡು ಬದುಕಬೇಕಾದ ಅನಿವಾರ್ಯತೆ ಇದೆ ಹಾಗೂ ನಾವೆಲ್ಲರೂ ಇದರ ಮೇಲೆ ಅವಲಂಬಿತರಾಗಿದ್ದೇವೆ. ನಾವೆಲ್ಲರೂ ನಮ್ಮ ಮನೆಯಲ್ಲಿ ಈ ತಾಂತ್ರಿಕತೆಯನ್ನು ಅಳವಡಿಸಿಕೊಂಡು ಎಷ್ಟೋ ಉಪಕರಣಗಳನ್ನು ದಿನನಿತ್ಯ ಬಳಸುತ್ತಿದ್ದೇವೆ. ಬೆಳಗಿನ ಅಲರಾಂನಿಂದ ಹಿಡಿದು ರಾತ್ರಿ ಮಲಗುವವರೆಗೂ ಇವುಗಳನ್ನು ನಾವು ಪ್ರತಿಕ್ಷಣವೂ ಬಳಸುತ್ತೇವೆ. ಇವುಗಳಲ್ಲಿ ಬಿಸಿನೀರು ಕಾಯಿಸುವ ಯಂತ್ರ (ಗೀಸ಼ರ್), ಆಹಾರ ಬಿಸಿ ಮಾಡುವ ಯಂತ್ರ (ಓವನ್), ಶೀತಲ ಪೆಟ್ಟಿಗೆ (ರೆಫ್ರಿಜರೇಟರ್), ಸಂಚಾರಿವಾಣಿ (ಮೊಬೈಲ್), ದೂರದರ್ಶನ (ಟಿವಿ), ದೂರನಿಯಂತ್ರಕ (ರಿಮೋಟ್), ನೀರಿನ ಟ್ಯಾಂಕ್‌ನಲ್ಲಿನ ನೀರಿನ ಮಟ್ಟ ಅಳೆಯುವ ಯಂತ್ರ ಮುಂತಾದವುಗಳು ಸೇರುತ್ತವೆ. ತಾಂತ್ರಿಕತೆಯಲ್ಲಿ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಈ ಮೇಲೆ ತಿಳಿಸಿರುವ ಉಪಕರಣಗಳನ್ನು ನಾವು ಇರುವ ಸ್ಥಳದಿಂದಲೆ ನಮಗೆ ಬೇಕಾದ ರೀತಿಯಲ್ಲಿ ನಿಯಂತ್ರಿಸಬಹುದಾದ ತಾಂತ್ರಿಕತೆಯನ್ನು ಅಂದರೆ ವಸ್ತುಗಳ ಅಂತರ್ಜಾಲ(ಐಓಟಿ: ಇಂಟರ್‌ನೆಟ್ ಆಫ್ ಥಿಂಗ್ಸ್)ವನ್ನು ಈಗಾಗಲೇ ಪರಿಚಯಿಸಲಾಗಿದೆ. ಇವುಗಳೆಲ್ಲವೂ ಕೆಲಸ ಮಾಡಲು ಒಂದು ಮುಖ್ಯವಾದ ಉಪಕರಣ ಬೇಕಾಗಿರುತ್ತದೆ. ಅದುವೇ ಸ್ಪರ್ಶತಂತು (ಆಂಟೆನಾ).

ನಿಸ್ತಂತು ಮತ್ತು ಸಂಚಾರಿ ಸಂವಹನಗಳಲ್ಲಿ ಬೇರೆ ಬೇರೆ ರೀತಿಯ ಉಪಕರಣಗಳು (ಎಕ್ವಿಪ್‌ಮೆಂಟ್ಸ್) ಮತ್ತು ತಾಂತ್ರಿಕತೆಯನ್ನು (ಟೆಕ್ನಾಲಜಿ)

Scanned with CamScanner